18

# ಹೋರಾಟವನ್ನು ಜಯಿಸುವುದು

ತನ್ನನ್ನು ಹಿಂಬಾಲಿಸುವವರೆಲ್ಲರೂ ಒಂದಾಗಿರಬೇಕೆಂದು ಯೇಸುವು ಪ್ರಾರ್ಥಿಸಿದನು (ಯೋಹಾನ 17:20, 21). "ಒಂದೇ ಮನಸ್ಸೂ ಒಂದೇ ಅಭಿಪ್ರಾಯ ಉಳ್ಳವರಾಗಿರಬೇಕೆಂದು" ಪೌಲನು ಕ್ರೈಸ್ತರನ್ನು ಒತ್ತಾಯಿಸಿದನು (1 ಕೊರಿಂಥ 1:10). "ವೈರತ್ವಗಳು," "ಹೋರಾಟ," "ಕೋಪ, ರಕ್ಷ ಬೇಧ, ಭಿನ್ನಮತ" ಮತ್ತು "ಗುಂಪುಗಾರಿಕೆಗಳು" ಕ್ರೈಸ್ತರು ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದದಂತೆ ಅಡ್ಡೀಪಡಿಸುವ ಶರೀರದ ಕಾರ್ಯಗಳಲ್ಲಿ ಒಳಗೊಂಡಿರುತ್ತವೆ (ಗಲಾತ್ಯ 5:19-21). ಈ ಪ್ರಾರ್ಥನೆಗಳೂ ಉಪದೇಶಗಳೂ ಇದ್ದರೂ, ಹೋರಾಟವು ಇಂದಿನ ಸಭೆಗಳಲ್ಲಿ ಒಂದು ಸಮಸ್ಯೆಯಾಗಿರುತ್ತದೆ.

ಹೋರಾಟವು ಇತರ ಅನೇಕ ಸಮಸ್ಯೆಗಳನ್ನು ಕೂಡಿಸಿಕಟ್ಟುವ ಅಂಶವಾಗಿದೆ. ಉದಾಹರಣೆಯಾಗಿ, ಪ್ರಸಂಗಿಗಳ ಮತ್ತು ಹಿರಿಯರ ಮಧ್ಯದಲ್ಲಿಯ ಭಿನ್ನತೆಗಳು, ಅನುಕೂಲತೆಗಳ ಬಗ್ಗೆ ಇಲ್ಲವೇ ಮಿಶನ್ ಕೆಲಸದ ಬಗ್ಗೆ ಒಪ್ಪಂದವಿಲ್ಲದಿರುವುದು ಮತ್ತು ತತ್ವದ ಒಡಕುಗಳು ಹೋರಾಟದಲ್ಲಿ ಪರಿಣಾಮಗೊಳ್ಳ ಬಹುದಾಗಿದೆ. ಸಭಾನಾಯಕರು ಏನನ್ನಾದರೂ ಮಾಡಲು ಸಿದ್ಧನಾಗಿದ್ದರೂ, ಅವನು ಯಶಸ್ವಿಯಾಗಿ ನಡಿಸಲು ಬಯಸಿದರೆ, ಅವನು ಸಭೆಯು ಹೋರಾಟದ ಸಮಸ್ಯೆಯನ್ನು ಜಯಿಸಲು ಸಹಾಯ ಮಾಡಲಿಕ್ಕೆ ಸಿದ್ಧನಾಗಿರಬೇಕು. ಹಾಗೆ ಮಾಡುವದಕ್ಕಾಗಿ, ಅವನು ಮೂರು ಪ್ರಶ್ನೆಗಳಿಗೆ ಉತ್ತರವನ್ನು ತಿಳಿದವನಾಗಿರಬೇಕು.

## ಹೋರಾಟವು ಏನಾಗಿರುತ್ತದೆ?

"ಹೋರಾಟ"ದ ಬಗ್ಗೆ ನಾವು ಮಾತಾಡುವಾಗ, ನಾವು ಅಭಿಪ್ರಾಯದ ಭಿನ್ನತೆಗಳು ಎಂದು ಅರ್ಥ ಮಾಡುವದಿಲ್ಲ, ಇಲ್ಲವೇ "ಸಂಘರ್ಷ" ಎಂದರ್ಥ ಮಾಡುವುದೂ ಇಲ್ಲ. ಯಾಕೆ? ಯಾಕಂದರೆ ಯಾವಾಗಲೂ ಭಿನ್ನಾಭಿಪ್ರಾಯಗಳು ಇದ್ದೇ ಇರುವವು ಮತ್ತು ಆ ಅರ್ಥದಲ್ಲಿ ಸಭೆಯಲ್ಲಿ ಘರ್ಷಣೆಗಳು ಇರುತ್ತವೆ. ಜನರಲ್ಲಿ ಭಿನ್ನತೆಯಿರುವ ಸಂಗತಿಯು ಸಮಸ್ಯೆಗಳಿಗೆ ಕಾರಣವಾಗುವದಿಲ್ಲ. ಪೌಲ ಮತ್ತು ಬಾರ್ನಬರು ಒಂದು ಸಂದರ್ಭದಲ್ಲಿ ತೀವ್ರವಾಗಿ ಭಿನ್ನತೆಯುಳ್ಳವರಾಗಿದ್ದರು, ಆದರೆ ಅವರ ಘರ್ಷಣೆಯು ಸಭೆಗೆ ಕೇಡನ್ನುಂಟು ಮಾಡಲಿಲ್ಲ. ಜನರ ಮಧ್ಯದಲ್ಲಿಯ ಭಿನ್ನತೆಗಳು ಸಮಸ್ಯೆಗಳನ್ನುಂಟು ಮಾಡುವದಿಲ್ಲ, ಆದರೆ ಜನರು ತಮ್ಮ ಭಿನ್ನತೆಯ ಬಗ್ಗೆ ಏನು ಮಾಡುವರೋ ಅದು ಸಮಸ್ಯೆಗಳನ್ನು ಉಂಟು ಮಾಡುತ್ತದೆ.

ಒಂದು ಇಂಗ್ಲೀಷ್ ಡಿಕ್‌ಶ್ನರಿಯು "strife" ಎಂಬ ಪದದಿಂದ "ಜಗಳವಾಡುವುದು, ಬಡಿದಾಡುವುದು" ಎಂದು ಇಲ್ಲವೇ "ಒಂದು ಜಗಳ; ಬಡಿದಾಟ" ಎಂದು ನಿರೂಪಿಸುತ್ತದೆ.[1] ಇನ್ನೊಂದು, "ಕಹಿ, ಕೆಲವು ಸಲ ಕಠಿಣವಾದ ಹೋರಾಟ ಇಲ್ಲವೇ ಒಡಕು" ಅಥವಾ "ಹೋರಾಟದ ಕೃತ್ಯ; ಬಡಿದಾಟ, ಹೋರಾಟ" ಎಂದು ಹೇಳುತ್ತದೆ ಮತ್ತು "ವೈಷಮ್ಯ"ವನ್ನು ಏಕಾರ್ಥದಂತೆ, "ಸಮಾಧಾನ, ಒಮ್ಮನಸ್ಸು" ಎಂಬುದನ್ನು ವಿರುದ್ಧಾರ್ಥಕ ಪದದಂತೆ ಕೊಡುತ್ತದೆ.[2] ಗಲಾತ್ಯ 5:20ದಲ್ಲಿಯ ಗ್ರೀಕ್ ಪದವು RSV, NRSV, ಮತ್ತು NASB ಯಲ್ಲಿ "ಹೋರಾಟ" ಎಂದು (ಮತ್ತು KJVಯಲ್ಲಿ "ಭಿನ್ನತೆ" ಎಂದೂ) ಭಾಷಾಂತರಿಸಿದ್ದು, ಕೆಲವು ಸಲ "ಹೋರಾಟ" ಎಂದು ಮತ್ತು ಕೆಲವು ಸಲ "ಜಗಳವಾಡುವುದು," "ಜಗಳಗಳು," "ವಿರೋಧಗಳು," ಇಲ್ಲವೇ "ಒಡಕುಗಳು"[3] ಎಂದು ಭಾಷಾಂತರಿಸಲ್ಪಟ್ಟಿವೆ. Vine's

Expository Dictionary of New Testament Words ಪ್ರಕಾರ, "ಹೋರಾಟ; ವಾದಗಳು" ಎಂದರ್ಥಕೊಡುತ್ತದೆ ಮತ್ತು "ವೈರತ್ವದ ವ್ಯಕ್ತ ಪಡಿಸುವಿಕೆಯಾಗಿದೆ."

ಆದುದರಿಂದ "ಹೋರಾಟ" ಎಂಬುದರಿಂದ ವೈರತ್ವದಿಂದ ಹೋರಾಡುವದನ್ನು ಇಲ್ಲವೇ ಜಗಳವಾಡುವದನ್ನು ಮುಂದುವರಿಯುವದರ ಅರ್ಥವಾಗುತ್ತದೆ ಮತ್ತು ಸಭೆಯ ಸದಸ್ಯರ ಮಧ್ಯದಲ್ಲಿ ವಿಭಜನೆಯ ಇಲ್ಲವೇ ವಿಭಾಗವಾಗುವದರ ಸ್ಥಿತಿಯಲ್ಲಿ ಪರಿಣಾಮಗೊಳ್ಳುತ್ತದೆ.

## ಹೋರಾಟದೊಂದಿಗೆ ವ್ಯವಹರಿಸುವದಕ್ಕೆ ಯಾಕೆ ಕಲಿತುಕೊಳ್ಳಬೇಕು?

ಹೋರಾಟದ ಸಮಸ್ಯೆಗಳನ್ನು ಬಗೆಹರಿಸುವುದು ಸಭೆಯ ನಾಯಕರಿಗೆ ಯಾಕೆ ಮಹತ್ವದ್ದಾಗಿದೆ?

ನಾಯಕರು ಸಭೆಯಲ್ಲಿ ಹೋರಟಗಳನ್ನು ಜಯಿಸುವುದನ್ನು ಕಲಿತು ಕೊಳ್ಳತಕ್ಕದ್ದು, ಮೊದಲು, ಯಾಕಂದರೆ ವಿಭಜನೆ ಇಲ್ಲವೇ ಹೋರಾಟವು ಒಂದು ಪಾಪವಾಗಿರುತ್ತದೆ. ಹೋರಾಟವು "ಶರೀರದ ಕೃತ್ಯಗಳಲ್ಲಿ" ಇರುವದೆಂದು ಬೋಧಿಸುವ ಗಲಾತ್ಯ 5:19-21ಕ್ಕೆ ಕೂಡಿಸಿ, ರೋಮಾಪುರ 1:29-31 ಹೋರಾಟವನ್ನು ಪಾಪಗಳ ಯಾದಿಯಲ್ಲಿ "ಕೊಲೆ" ಮತ್ತು "ಮೋಸ"ದ ಮಧ್ಯದಲ್ಲಿ ಯಾದಿಮಾಡುತ್ತದೆ. ಕರ್ತನು ದ್ವೇಷಿಸುವ ಆರು ಸಂಗತಿಗಳಲ್ಲಿ "ಒಡಹುಟ್ಟಿದವರಲ್ಲಿ ಜಗಳ ಬಿತ್ತುವವನು ಇರುತ್ತಾನೆ" (ಜ್ಞಾನೋಕ್ತಿ 6:19; RSV).

ಎರಡನೆಯದು, ಹೋರಾಟವು ಬಗೆ ಹರಿಸಲ್ಪಡದಿದ್ದಲ್ಲಿ ಸಭೆಯು ಬೆಳವಣಿಗೆ ಯಾಗಲಾರದು. (1) ಸಭೆಯ ಸದಸ್ಯರು ಆಂತರಿಕ ಹೋರಾಟಗಳಲ್ಲಿ ಒಳಗೊಂಡವರಾಗಿ, ಹೊರಗಿನವರಿಗೆ ಪ್ರಸಂಗಿಸಲು ಸಮಯವಾಗಲೀ ಸಾಮರ್ಥ್ಯವಾಗಲೀ ಇಲ್ಲದವರಾಗುವರು. (2) ಕ್ರಿಸ್ತನಿಗಾಗಿ ಗೆದ್ದು ಕೊಳ್ಳಲ್ಪಡುವವರಾಗಿದ್ದವರು ಸದಸ್ಯತ್ವಕ್ಕೆ ವಿರುದ್ಧವಾಗಿ ಹೋರಾಡುತ್ತ ಹಿಂದಿರುಗಿ ಕಳುಹಿಸಲ್ಪಡಬಹುದು. ಅದು ನಮ್ಮ ಸ್ವಂತ ಮಕ್ಕಳನ್ನು, ಅವರಲ್ಲಿ ಅನೇಕರು ಸಭೆಯಲ್ಲಿ ಜಗಳಗಳನ್ನು ಒಡಕುಗಳನ್ನು ಯಾವಾಗಲೂ ನೋಡಿದ್ದವರಿಂದ ಒಳಗೊಂಡಿರ ಬಹುದು. (3) ಬಹಳ ಸಲ, ಹೋರಾಟದ ಪರಿಣಾಮವಾಗಿ, ಸಭೆಯು ಒಡೆದು ಹೋಗುತ್ತದೆ, ಇಲ್ಲವೇ ಕೆಲವು ಸದಸ್ಯರು ಬಿಟ್ಟು ಹೋಗುತ್ತಾರೆ, ಇಲ್ಲವೇ ಸದಸ್ಯರು ಉಳಿದು ಕೊಳ್ಳುತ್ತಾರೆ ಮತ್ತು ಸಂತೋಷವಿಲ್ಲದವರಾಗಿರುತ್ತಾರೆ. ಇವುಗಳಲ್ಲಿ ಯಾವುದೇ ಪರಿಣಾಮವು ಸಭೆಯನ್ನು ಸಮಯದಲ್ಲಿ ಹಿಂದಿಡಬಹುದು ಮತ್ತು ಇನ್ನೂ ಕೆಟ್ಟದ್ದಾಗಿ - ಭವಿಷ್ಯದಲ್ಲಿ ಸನಿಹದಲ್ಲಿ ಬೆಳವಣಿಗೆಯನ್ನು ಅಸಾಧ್ಯವಾದದ್ದನ್ನಾಗಿ ಮಾಡಬಹುದು.

ಮೂರನೆಯದು, ಸ್ಥಳಿಕ ಸಭೆಗಳು ಹೋರಾಟವನ್ನು ಜಯಿಸಲು ಕಠಿಣವಾಗಿ ಕೆಲಸ ಮಾಡುವ ಅಗತ್ಯತೆಯಿರುತ್ತದೆ ಯಾಕಂದರೆ ಅದು ಸಭೆಯಲ್ಲಿ ಬಹಳವಾಗಿ ಇರುವಂಥ ಸಮಸ್ಯೆಯಾಗಿದೆ. (1) ಹೋರಾಟವು ಅಪೊಸ್ತಲರ ಮಧ್ಯದಲ್ಲಿ ಎದ್ದಿತು (ಮತ್ತಾಯ 20:20-28). (2) ಅಪೊಸ್ತಲರ ಕೃತ್ಯಗಳಲ್ಲಿ ವಿವರಿಸಲ್ಪಟ್ಟಂತೆ ಆದಿ ಸಭೆಯಲ್ಲಿ ಹೋರಾಟ ವಿತ್ತು. ಅಪೊಸ್ತಲರ ಕೃತ್ಯಗಳು 6:1ರ ಪ್ರಕಾರ ಸ್ಥಳಿಕ ಇಬ್ರಿಯರಿಗೆ ವಿರುದ್ಧವಾಗಿ ಯೆಹೂದಿ ಇಬ್ರಿಯರ ಪರವಾಗಿ ಒಂದು ದೂರು ಎದ್ದಿತು." (ನೋಡಿರಿ ಅಪೊಸ್ತಲರ ಕೃತ್ಯಗಳು 15.) (3) ಕೊರಿಂಥದಲ್ಲಿ ಸಭೆಯು ಹೋರಾಟದಿಂದ ವಿಭಾಗವಾಗಿತ್ತು (1 ಕೊರಿಂಥ 1:11). (4) ಪ್ರೀತಿಯ ಫಿಲಿಪ್ಪಿ ಸಭೆಯಲ್ಲಿಯೂ ಹೋರಾಟವು ಸಂಭವಿಸಿತು; ಇಬ್ಬರು ಮಹಿಳೆಯರು ಒಂದಾಗಬೇಕೆಂದು ಬುದ್ಧಿವಾದ ಹೇಳಲ್ಪಟ್ಟರು (ಫಿಲಿಪ್ಪಿ 4:2). (5) ಬೇರೆ ಪತ್ರಿಕೆಗಳಲ್ಲಿ (ಉದಾಹರಣೆ ರೋಮಾಪುರ 14:19) ವಾಕ್ಯಭಾಗಗಳು ನೇರವಾಗಿ ಇಲ್ಲವೇ ಪರೋಕ್ಷ ವಾಗಿ ಸಮಸ್ಯೆಯೊಂದಿಗೆ ವ್ಯವಹರಿಸುವದರಿಂದ ಹೋರಾಟವು ಇನ್ನೂ ಹೆಚ್ಚಾಗಿ ಪ್ರಸಾರವಾ ಗಿತ್ತು. (6) ಹೋರಾಟದಿಂದ ಹೆಚ್ಚು ತೊಂದರೆಗೊಳಗಾಗದ ಸಭೆಯನ್ನು ಇಂದು ಕಂಡು ಕೊಳ್ಳುವುದು ಕ್ವಚಿತವಾಗಿದೆ.

## ಹೋರಾಟವು ಹೇಗೆ ಜಯಿಸಲ್ಪಡಬಹುದು?

ಹೋರಾಟವನ್ನು ಕಡಿಮೆ ಮಾಡಲು ಎರಡು ಹೆಜ್ಜೆಗಳು ಮಹತ್ವದವುಗಳಾಗಿವೆ: ತಡೆಹಿಡಿಯುವುದು ಮತ್ತು ಸ್ವಸ್ಥಮಾಡುವುದು.

### ಹೋರಾಟವನ್ನು ತಡೆಗಟ್ಟುವುದು

ಅತ್ಯುತ್ತಮ ಗುಣಪಡಿಸುವಿಕೆಯು ತಡೆಗಟ್ಟುವುದಾಗಿದೆ. ಹೆಚ್ಚು ದೊಡ್ಡ ಐಕ್ಯತೆಯನ್ನು ಉತ್ಪಾದಿಸಲು ಪ್ರಯತ್ನಮಾಡುವ ಯಾವುದೇ ಸಂಗತಿಯು ಹೋರಾಟವನ್ನು ಕಡಿಮೆ ಮಾಡುತ್ತದೆ. ಸಭಾ ನಾಯಕರು ಈ ಕೆಳಗಿನ ಆರು ವಿಧಗಳಲ್ಲಿ ಸಹಾಯ ಮಾಡಬಹುದು.

*ಪ್ರಸಂಗಿಸುವದರಿಂದ ಮತ್ತು ಬೋಧಿಸುವದರಿಂದ* ಯಾವುದೇ ಸಮಸ್ಯೆಯು ಉದ್ಭವಿಸುವದಕ್ಕಿಂತ ಮೊದಲು ಸಭೆಗೆ ವಿಷಯದ ಮೇಲೆ ಪ್ರಸಂಗಿಸುವಿಕೆ ಮತ್ತು ಬೋಧನೆ ಇರಬೇಕು. ತನ್ನ ಜನರು ಒಂದಾಗಿರಬೇಕೆಂದು (ಯೋಹಾನ 17:20, 21) ಮತ್ತು "ಪರಿಶುದ್ಧಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಬೇಕೆಂದು" (ಎಫೆಸ 4:3). ಕ್ರಿಸ್ತನು ಬಯಸುತ್ತಾನೆಂಬುದನ್ನು ಸಭೆಯ ಸದಸ್ಯರು ಅರ್ಥಮಾಡಿಕೊಳ್ಳುವ ಅಗತ್ಯತೆಯಿರುತ್ತದೆ. ಜಗಳಕ್ಕೆ ಕಾರಣವಾಗುವ ಪಾಪವನ್ನು ದೇವರು ದ್ವೇಷಿಸುತ್ತಾನೆ (ಜ್ಞಾನೋಕ್ತಿ 6:19) ಮತ್ತು ನಮ್ಮ ಪ್ರೀತಿಯಿಂದ ನಮ್ಮನ್ನು ತಿಳಿಯಲು ಕ್ರಿಸ್ತನು ಬಯಸುತ್ತಾನೆ ಎಂಬುದನ್ನು (ಯೋಹಾನ 13:34, 35) ಅವರು ತಿಳಿಯುವ ಅಗತ್ಯತೆಯಿದೆ. ಜ್ಞಾನೋಕ್ತಿಗಳ ಪ್ರಕಾರವಾಗಿ ಜ್ಞಾನಿಯು ಹೋರಾಟವನ್ನು ತಪ್ಪಿಸಿಕೊಳ್ಳುತ್ತಾನೆ ಎಂಬುದನ್ನು ಅವರು ಕಲಿತುಕೊಳ್ಳುವ ಅಗತ್ಯತೆಯಿದೆ:

> ದ್ವೇಷವು ಜಗಳಗಳನ್ನೆಬ್ಬಿಸುತ್ತದೆ; ಪ್ರೀತಿಯು ಪಾಪಗಳನ್ನೆಲ್ಲಾ ಮುಚ್ಚುತ್ತದೆ (10:12).
>
> ತುಂಟನು ಜಗಳ ಬಿತ್ತುತ್ತಾನೆ; ಚಾಡಿಕೋರನು ಮಿತ್ರರನ್ನು ಅಗಲಿಸುತ್ತಾನೆ (16:28).
>
> ವ್ಯಾಜ್ಯದ ಆರಂಭವು ಏರಿಗೆ ಬಿಲ ಬಿದ್ದಂತೆ; ಸಿಟ್ಟೇರುವದಕ್ಕೆ ಮುಂಚೆ ಜಗಳವನ್ನು ಬಿಟ್ಟುಬಿಡು (17:14).
>
> ಜ್ಞಾನಹೀನನ ತುಟಿಗಳು ಜಗಳವನ್ನು ಹೂಡುತ್ತವೆ; ... (18:6).
>
> ವ್ಯಾಜ್ಯಕ್ಕೆ ದೂರನು ಮಾನಕ್ಕೆ ಯೋಗ್ಯನು (20:3).
>
> ಆಸೆಬಡುಕನು ಜಗಳವನ್ನೆಬ್ಬಿಸುವನು (28:25).
>
> ಕೋಪಿಷ್ಠನು ಜಗಳವನ್ನೆಬ್ಬಿಸುವನು; ಕ್ರೋಧಶೀಲನು ದೋಷಭರಿತನು (29:22).
>
> ಹಾಲು ಕಡೆಯುವದರಿಂದ ಬೆಣ್ಣೆ, ಮೂಗು ಹಿಂಡುವದರಿಂದ ರಕ್ತ, ಕೋಪ ಕಲುಕುವದರಿಂದ ಜಗಳ (30:33).

ಅವರು "ಮೈಗಳ್ಳರೂ ಹರಟೆ ಮಾತಾಡುವವರೂ" ಆಗುವದಕ್ಕೆ ವಿರುದ್ಧವಾಗಿ ಅವರು ಎಚ್ಚರಿಸಲ್ಪಡುವ ಅಗತ್ಯತೆಯಿದೆ (1 ತಿಮೋಥೆ 5:13; ನೋಡಿರಿ ರೋಮಾಪುರ 1:29 ಮತ್ತು 2 ಕೊರಿಂಥ 12:20). ಎಲ್ಲಾ ಪ್ರಸಂಗಿಸುವಿಕೆಯು *ಸತ್ಯವಾದದ್ದೂ ಪ್ರೀತಿಯಲ್ಲಿ* ಇರುವಂಥದ್ದೂ ಆಗಿರತಕ್ಕದ್ದು (ಎಫೆಸ 4:15).

*ಮಾದರಿಯ ಐಕ್ಯತೆಯಿಂದ.* ಸಭೆಯ ನಾಯಕರು ಐಕ್ಯತೆಗೆ ಆದರ್ಶರಾಗಿರಬೇಕು. ಹಿರಿಯರು ಮತ್ತು ಪ್ರಸಂಗಿಯು (ಗಳು) ಮತ್ತು ಡೀಕನರು "ಐಕ್ಯತೆಯಲ್ಲಿ ವಾಸಿಸುವವರು" ಆಗದೇ ಹೋದರೆ (ಕೀರ್ತನೆ 133:1), ಸ್ಥಳಿಕ ಸಭೆಯ ಉಳಿದವರು ಹಾಗೆ ಮಾಡಲು ಅವರು ಹೇಗೆ ನಿರೀಕ್ಷಿಸುವರು?

*ಜನರನ್ನು ಒಂದಾಗಿ ತರುವದರಿಂದ.* ಸಭೆಯ ಹಿರಿಯರು ಪ್ರೀತಿಯ ಅನ್ಯೋನ್ಯತೆ ಯಾಗಿರುವ ಸಭೆಯನ್ನು ಉತ್ಪಾದಿಸಲು ಪ್ರಯತ್ನಿಸತಕ್ಕದ್ದು. ಅದರಲ್ಲಿ "ಕುಟುಂಬ ಭಾವನೆ" ಮತ್ತು "ಸಹೋದರರು" ಇಲ್ಲವೆ ಸಹೋದರಿಯರು ಒಬ್ಬರಿಗೊಬ್ಬರು ವಿವರಿಸುವ ರೀತಿಯಲ್ಲಿ ಇರತಕ್ಕದ್ದು. ಇದು ಹೇಗೆ ಸಂಭವಿಸುತ್ತದೆ?

ಪ್ರಾರಂಭಿಸುವಂತೆ, ಕ್ರಮ ಪ್ರಕಾರವಾದ ಆರಾಧನೆಗಳಲ್ಲಿ ಅಲ್ಲದೇ ಬೇರೆ ಸಮಯಗಳ ಲ್ಲಿಯೂ ಕ್ರೈಸ್ತರಿಗೆ ಒಂದಾಗಿರುವ ಅವಕಾಶಗಳನ್ನು ಒದಗಿಸತಕ್ಕದ್ದು: ಬೈಬಲ್ ಕ್ಲಾಸುಗಳು, ಕಾರ್ಯದ ದಿನಗಳು, ವಿಶೇಷ ಯೋಜನೆಗಳು ಇತ್ಯಾದಿಗಳು ಕ್ರೈಸ್ತರಿಗಾಗಿ ಒಬ್ಬರನ್ನೊಬ್ಬರು ತಿಳಿಯಲಿಕ್ಕೆ ಮತ್ತು ಒಬ್ಬರನ್ನೊಬ್ಬರು ಹೆಚ್ಚು ಪ್ರೀತಿಸಲಿಕ್ಕೆ ಅವಕಾಶಗಳನ್ನು ಒದಗಿಸುವವು. ಸಭೆಗೆ ವಿಶೇಷವಾಗಿ ಮಹತ್ವವುಳ್ಳ ಅವಕಾಶಗಳು ಒಂದಾಗಿ ಊಟಮಾಡುವುದು. ಭಕ್ತ ರೊಂದಿಗೆ "ಊಟ ಮಾಡದೆ ಇರುವಂಥದ್ದು" "ಅನ್ಯೋನ್ಯತೆಯನ್ನು ಕಳೆದು ಕೊಳ್ಳುವುದಕ್ಕಿಂತ" ಮಹತ್ವದ್ದಾಗಿರುತ್ತದೆ (1 ಕೊರಿಂಥ 5:11), ಆಗ ಭಕ್ತರೊಂದಿಗೆ ಊಟಮಾಡುವುದು ಅಷ್ಟೇ "ಅನ್ಯೋನ್ಯತೆಗೆ" ಮಹತ್ವದ್ದಾಗಿರುತ್ತದೆ!

*ಸಭೆಯಲ್ಲಿ ಬೆಚ್ಚಗಿನ ಮತ್ತು ಪ್ರೀತಿಯ ವಾತಾವರಣವನ್ನು ಉಂಟು ಮಾಡುವದರಿಂದ.* ಆರಾಧನೆಗಳು ಮೇಲುಕ್ಕೆತ್ತುವಂತೆ ಮಾಡುವ ವಾತಾವರಣಗಳನ್ನು ಬೆಳಸುವಂತೆ ಸಭೆಯ ನಾಯಕರು ಸಹಾಯ ಮಾಡುವುದು. ಆರಾಧನೆಯು ಆಕರ್ಷಣೆಯಿಲ್ಲದ್ದಾಗುವಾಗ, ಹಾಡುವಿಕೆಯು ಉತ್ಸಾಹವಿಲ್ಲದ್ದಾಗುವಾಗ, ಮತ್ತು ಪ್ರಸಂಗಿಸುವಿಕೆಯು ಸಂಪೂರ್ಣವಾಗಿ ನಕಾರಾತ್ಮಕವಾದದ್ದಾಗುವಾಗ, ಜನರು ಚೈತನ್ಯಪಡೆಯದೇ ನಿರಾಶರಾಗಿ ಆರಾಧನೆಯನ್ನು ಬಿಟ್ಟು ಹೋಗುವವರಾಗಬಹುದು - ಅವರು ಆರಾಧನೆಯ ಪೂರ್ವದಲ್ಲಿದ್ದಂಥ ವರಕ್ಕಿಂತ ಹೆಚ್ಚಾಗಿ ದೇವರೊಂದಿಗೆ ಮತ್ತು ಒಬ್ಬರನ್ನೊಬ್ಬರೊಂದಿಗೆ ನಿಕಟತೆಯಿಲ್ಲದವರಾಗಿ ಹೋಗು ವರು. ಇನ್ನೊಂದು ಕಡೆಯಲ್ಲಿ, ಬೆಚ್ಚಗಿನ ಹೃದಯದ, ಆಸಕ್ತಿಯುಳ್ಳ ಸಂಗೀತ ಮತ್ತು ಉನ್ನತಕ್ಕೇರಿ ಸುವ ಪ್ರಸಂಗಿಸುವಿಕೆಯು ಜನರನ್ನು ಒಂದಾಗಿ ತರುವುದು. ಇದಲ್ಲದೇ ಜನರು ಒಬ್ಬರನ್ನೊಬ್ಬರು ಹೆಸರಿನಿಂದ ತಿಳಿದು ಕೊಳ್ಳುವರು. ಜನರ ಹೆಸರುಗಳನ್ನು ಉಪಯೋಗಿಸಲು ಪ್ರಾರಂಭಿಸುವರು. ಮತ್ತು ಸದಸ್ಯರು ಒಬ್ಬರು ಇನ್ನೊಬ್ಬರನ್ನು ಹೆಸರಿನಿಂದ ಕರೆಯುವಂತೆ ಸಹಾಯ ಮಾಡುವರು. ಅಸ್ವಸ್ಥತೆಯಲ್ಲಿರುವವರು, ವಿಯೋಗ ದುಃಖದಲ್ಲಿರುವವರು ಇಲ್ಲವೇ ತೊಂದರೆಗೊಳಗಾದವರು ಹೆಸರು ಹಿಡಿದು ಹೇಳಲ್ಪಟ್ಟು ಪ್ರಾರ್ಥಿಸಲ್ಪಡಬೇಕು. ಸಭೆಯ ನಾಯಕರು ಕೃತಜ್ಞತೆಯ ವಾತಾವರಣ ನಿರ್ಮಿಸಲು ಪ್ರಯತ್ನಿಸಬೇಕು. ತಮ್ಮ ಮೆಚ್ಚಿಕೆಯನ್ನು ಪ್ರದರ್ಶಿಸುವಂತೆ ಮೆಚ್ಚಿಕೊಳ್ಳ ಬೇಕು, ಸಾಧ್ಯವಾದಷ್ಟು ಸಲ, ಸಾಧ್ಯವಾದಷ್ಟು ಮಾರ್ಗಗಳಲ್ಲಿ, ಸಭೆಯಲ್ಲಿ ಸಾಧ್ಯವಾ ದಷ್ಟು ಜನರಿಗೆ ಹೀಗೆ ಮಾಡಬೇಕು.

*ಅಭಿಪ್ರಾಯದ ವಿಷಯಗಳಲ್ಲಿ ಭಿನ್ನತೆಗಳನ್ನು ಇಡುವರ ಮೂಲಕವಾಗಿ* ಅಭಿಪ್ರಾಯಗ ಳಲ್ಲಿ ಭಿನ್ನತೆಗಳಿಗೆ ಎಡೆಕೊಡುವಂತೆ ಅನ್ಯೋನ್ಯತೆಯನ್ನು ಉತ್ಪಾದಿಸಲು ಗುರಿಯಿಟ್ಟುಕೊ ಳ್ಳುವ ಅವಶ್ಯಕತೆ ಸಭೆಯ ನಾಯಕರಿಗೆ ಇರುತ್ತದೆ. ಎಲ್ಲಾ ಪ್ರಶ್ನೆಗಳಲ್ಲಿ ಏಕರೂಪತೆಯನ್ನು ಒತ್ತಾಯಪೂರ್ವಕವಾಗಿ ಹೊರುವುದು. ಸಮಾಧಾನಕ್ಕಿಂತ ಹೆಚ್ಚಾಗಿ ಹೋರಾಟಕ್ಕೆ ನಡಿಸುತ್ತದೆ.

*ನಾಯಕತ್ವದ "ತೆರೆದ" ಪದ್ಧತಿಯನ್ನು ರೂಡಿಸುವದರಿಂದ* ಸಭೆಯ ಹಿರಿಯರು ತಮ್ಮ ಯೋಚನೆಗಳಲ್ಲಿ ಮತ್ತು ಆಸಕ್ತಿಗಳಲ್ಲಿ, ತೆರೆದವರಾಗಿರಬೇಕು, ತಮ್ಮ ಗಮನಕ್ಕೆ ಬರುವ ವಿಷಯಗಳ ಮೇಲೆ ಸದಸ್ಯರೊಂದಿಗೆ ಆಗಾಗ ಮತ್ತು ಪೂರ್ಣವಾಗಿ ತಿಳಿಸುತ್ತಿರಬೇಕು ಮತ್ತು

ಅವರು ಅದನ್ನು ಸ್ವೀಕರಿಸುವಾಗ ಅದನ್ನು ಸ್ವಾಗತಿಸ ಬೇಕು. ಬಹುಮತದಿಂದಲ್ಲ ಆದರೆ ಒಮ್ಮತದಿಂದ ನಿರ್ಣಯಗಳು ಮಾಡಲ್ಪಡುವಂತೆ ನೋಡಿಕೊಳ್ಳಬೇಕು. ಇತರರೊಂದಿಗೆ ಚರ್ಚಿಸಿದ ನಂತರವೇ ಹಾಗೆ ಮಾಡತಕ್ಕದ್ದು. ಸಭೆಯ ನಾಯಕರು ಅಲ್ಪ ಸಂಖ್ಯಾತರ ದಬ್ಬಾಳಿಕೆಯನ್ನು ವಿರೋಧಿಸಬೇಕು. ಇತರರು ಮಾಡಿದ ಸೂಚನೆಗಳನ್ನು ತಿರಸ್ಕರಿಸುತ್ತ ಒಬ್ಬ ಮನುಷ್ಯನು ಇಲ್ಲವೇ ಒಂದು ಚಿಕ್ಕ ಗುಂಪು "ಸಭೆಯನ್ನು ನಡಿಸುವದನ್ನು" ತಡೆಗಟ್ಟ ಬೇಕು. ಹೀಗೆ ಮಾಡಲು ಈ ಕೆಳಗಿನ ರೀತಿಯನ್ನು ಬಹಿರಂಗವಾಗಿ ಹೇಳಬೇಕು: "ನಾವು ಸಭೆಯ ಪ್ರತಿಯೊಬ್ಬ ಸದಸ್ಯನನ್ನು ಗೌರವಿಸುತ್ತೇವೆ. ಯಥಾರ್ಥವಾಗಿ ನಿಮ್ಮ ಅಭಿಪ್ರಾಯವನ್ನು ಕೇಳಲಿಕ್ಕೆ ಬಯಸುತ್ತೇವನಿಮ್ಮ ಅಭಿಪ್ರಾಯಗಳನ್ನು ಕೇಳಿದ ನಂತರವೂ, ಬೇರೆ ಕೆಲವೊಂದು ಕಾರ್ಯವು ಚೆನ್ನಾಗಿ ಕಂಡು ಬಂದರೆ, ಹಾಗೂ ಹೆಚ್ಚಾದ ಸದಸ್ಯರಿಂದ (ಇಲ್ಲವೇ ಪುರುಷರಿಂದ) ಸ್ವೀಕರಿಸಲ್ಪಟ್ಟರೆ, ನಿಮ್ಮ ಸಲಹೆಯನ್ನು ನಾವು ಸ್ವೀಕರಿಸಿಕೊಳ್ಳಲಾರೆವು. ಹಾಗೆ ಸಂಭವಿಸಿದರೆ, ವೈಯಕ್ತಿಕವಾಗಿ ನೀವು ಅದನ್ನು ತೆಗೆದು ಕೊಳ್ಳುವದಿಲ್ಲ ಎಂದು ಆದರೆ ನೀವು ನಮ್ಮೊಂದಿಗೆ ಕೆಲಸ ಮಾಡುವಿರೆಂದು ನಿರೀಕ್ಷಿಸುತ್ತೇವೆ. ನಮ್ಮೊಂದಿಗೆ ಸಹಾಯ ಮಾಡಿರಿ, ನಮ್ಮೊಂದಿಗೆ ಪ್ರಾರ್ಥಿಸಿರಿ ಅತೀ ದೊಡ್ಡ ಒಳ್ಳೇಯದು ಸಂಭವಿಸುವುದು, ನೀವು ನಮಗೆ ಬೇಕು."

**ಹೋರಾಟದ ವಾಸಿಯಾಗುವಿಕೆ**

ನಾವು ಅದಕ್ಕೆ ಎಷ್ಟು ವಿರುದ್ಧವಾಗಿ ಪ್ರಸಂಗಿಸಿದರೂ ಇಲ್ಲವೇ ಅದನ್ನು ತಪ್ಪಿಕೊ ಳ್ಳಲು ಕೆಲಸ ಮಾಡಿದರೂ ಹೋರಾಟವು ಸ್ಥಳಿಕ ಸಭೆಯಲ್ಲಿ ಉದ್ಭವಿಸುವುದು. ಆಗ ಏನನ್ನು ಮಾಡಬೇಕು?

ಸಮಸ್ಯೆಯು ಗುರುತಿಸಲ್ಪಡಬೇಕು ಮತ್ತು ಪರಿಹರಿಸಲ್ಪಡಬೇಕು ಅಪೊಸ್ತಲ ಕೃತ್ಯ 6ರಲ್ಲಿ ಸಭೆಯ ನಾಯಕರು ಹೋರಾಟವು ಹೇಗೆ ತಿರುಗುವದೆಂಬದನ್ನು ನೋಡಲು ಕಾಯಲಿಲ್ಲ. ಇಲ್ಲವೇ ಸಮಸ್ಯೆಯನ್ನು ಪ್ರಚೋದಿಸಿದವರು ತೊಂದರೆ ಕೊಡುವವರಾಗಿದ್ದಾರೆ. ಅವರ ದೂರನ್ನು ಕೇಳುವರಲ್ಲಿ ಅರ್ಥವಿಲ್ಲ ಎಂದು ಹೇಳಿಕೊಳ್ಳಲಿಲ್ಲ. ಗುಣುಗುಟ್ಟುವವರ ವಿರುದ್ಧ ಅವರು ಪ್ರಸಂಗಿಸಲಿಲ್ಲ, ಇಲ್ಲವೇ ಇಡೀ ಸಭೆಯನ್ನು ವಿಚಾರಿಸದೇ ತಮ್ಮ ಸ್ವಂತ ಪರಿಹಾರವನ್ನು ಕೈಗೊಳ್ಳಲಿಲ್ಲ ಅವರು ಸಮಸ್ಯೆಯನ್ನು ಪರಿಹರಿಸಿದರು. ಹಾಗೆಯೇ ಭಿನ್ನಾಭಿಪ್ರಾಯಗಳು ಇಂದು ಪರಿಹರಿಸಲ್ಪಡಬೇಕು. ಯುವೋದ್ಯಳು ಮತ್ತು ಸಂತುಕೆಯು ಒಂದಾಗಿರಬೇಕೆಂದು ಪೌಲನು ಒತ್ತಾಯಮಾಡಿದನು (ಫಿಲಿಪ್ಪಿ 4:2), ಹಾಗೆಯೇ ಸಭೆಯ ನಾಯಕರು ಒಬ್ಬರಿಗೊಬ್ಬರು ಒಪ್ಪಿಕೊಳ್ಳದ ಸಹೋದರರ ಮಧ್ಯದಲ್ಲಿ ಒಪ್ಪಂದ ತರುವಂತೆ ಪ್ರಯತ್ನಿಸಬೇಕು. ಹೇಗೆ?

*ಮೊದಲನೆಯದು, ಸಭೆಯ ನಾಯಕರು, ಏಕಾಂತದಲ್ಲಿ ಒಪ್ಪಿಕೊಳ್ಳದಿರುವವರನ್ನು ಒಪ್ಪಿಕೊಳ್ಳುವಂತೆ, ಇಲ್ಲವೇ "ಒಪ್ಪಿಕೊಳ್ಳದಿರಲು ಒಪ್ಪಿಕೊಳ್ಳುವಂತೆ ಪ್ರಯತ್ನಿಸ ಬೇಕು."* ಸಂಬಂಧಪಟ್ಟ ಪಕ್ಷಗಳನ್ನು ಒಂದು ಪ್ರತ್ಯೇಕ ಕೂಟದಲ್ಲಿ, ಅವರನ್ನು ವಿಭಾಗಿಸಿದ ವಿಷಯವನ್ನು ಪರಿಹರಿಸಲು ಸಹಾಯ ಮಾಡಲು ಪ್ರಯತ್ನಿಸುವದಕ್ಕಾಗಿ ಒಟ್ಟಾಗಿ ತರುವದರಿಂದ ಸಮಾಧಾನ ಪಡಿಸುವವರ ಪಾತ್ರವನ್ನು ಅವರು ವಹಿಸಬೇಕು. ಜಗಳ ಮಾಡುತ್ತಿದ್ದವರು ಪ್ರಶ್ನೆಯ ಮೇಲೆ ಒಪ್ಪಿಕೊಂಡರೆ, ಸಮಸ್ಯೆಯು ಪರಿಹಾರವಾಗುತ್ತದೆ. ವಿಷಯವು ನಂಬಿಕೆಯ ವಿಷಯವಾ ಗಿರುವದಿಲ್ಲ ಎಂದು ಇಬ್ಬರೂ ಒಪ್ಪಿಕೊಂಡರೆ, ಆಗ ಅವರು "ಒಪ್ಪಿಕೊಳ್ಳದಿರಲು ಒಪ್ಪಿಕೊ ಳ್ಳುವವರನ್ನು" ಮಾಡಲಿಕ್ಕೆ ಸಿದ್ಧರಾಗಬಹುದು. ಭಿನ್ನತೆಯು ನಂಬಿಕೆಯ ವಿಷಯವನ್ನು ಒಳಗೊಂಡಿದೆ ಎಂದು ಒಬ್ಬನು ನಂಬಿದರೂ, ಸಮಸ್ಯೆಯು ಪರಿಹರಿಸಲ್ಪಡುವದಿಲ್ಲ.[4] ವಿಷಯವು ನಂಬಿಕೆಯ ವಿಷಯವಾಗಿರುವದಿಲ್ಲ ವೆಂಬ ವಿಚಾರವನ್ನು ಎರಡೂ ಪಕ್ಷದವರು ಸ್ವೀಕರಿಸಲು ಸಿದ್ಧರಾದರೆ, ಅವರು ಇನ್ನೂ ಅದು ಒಪ್ಪಿಕೊಳ್ಳಲಾದ ವಿಷಯವೆಂದು ಇನ್ನೂ ನಂಬಬಹುದು. ಒಬ್ಬ ಪ್ರಸಂಗಿಯನ್ನು ಇಟ್ಟು ಕೊಳ್ಳಬೇಕೋ ಇಲ್ಲವೇ ತೆಗೆದು ಹಾಕಬೇಕೋ

ಎಂಬುದನ್ನು ಕುರಿತ ಪ್ರಶ್ನೆಗಳು ಇಲ್ಲವೇ ಧಾರ್ಮಿಕವಲ್ಲದವುಗಳಿಗಾಗಿ ಕಟ್ಟಡವನ್ನು ಉಪಯೋಗಿಸಬಾರದು ಎಂಬ ಪ್ರಶ್ನೆಗಳು, ಎರಡು ಪಕ್ಷಗಳವರು ಒಪ್ಪಿಕೊಳ್ಳಲಾರದಷ್ಟು ಮಹತ್ವವುಳ್ಳವುಗಳಾಗಿ ತೋರುತ್ತವೆ.

*ಎರಡನೆಯದು, ಹೋರಾಟದಲ್ಲಿ ನೇರವಾಗಿ ಒಳಗೊಂಡವರಿಂದ ಒಪ್ಪಂದವು ತಲುಪದಿದ್ದರೆ, ಸಭೆಯ ನಾಯಕರು ವಿಷಯವನ್ನು ನಿರ್ಣಯಿಸಲು ಬಹಿರಂಗ ಚರ್ಚೆಯ ಅವಕಾಶವನ್ನು ಒದಗಿಸಬಹುದು.* ಒಂದು ವಿಷಯವು ಹೆಚ್ಚು ಚರ್ಚೆಯನ್ನು ಒಳಗೊಂಡಿದ್ದರೆ, ಒಂದಕ್ಕಿಂತ ಹೆಚ್ಚು ಕೂಟಗಳನ್ನು ಏರ್ಪಡಿಸಬೇಕಾಗಬಹುದು. ಕೂಟವು (ಇಲ್ಲವೇ ಕೂಟಗಳು) ಕೆಲವೊಂದು ಮಾರ್ಗದರ್ಶನಗಳನ್ನು ಅನುಸರಿಸ ಬೇಕು ಈ ಕೆಳಗಿನವುಗಳು ಕೂಡಿಸಲ್ಪಡಬಹುದು:

(1) *ದೇವರ ನಿರ್ದೇಶನವನ್ನು ಹುಡುಕಿರಿ.* ಪ್ರಾರ್ಥನೆಯು ವಿಧಾನದ ಭಾಗವಾಗಿರಬೇಕು. ನಾವು "ಎಡೆ ಬಿಡದೆ ಪ್ರಾರ್ಥಿಸಿದರೆ" (1 ಥೆಸಲೊನೀಕ 5:17; ನೋಡಿರಿ ಲೂಕ 18:1; ರೋಮಾಪುರ 12:12; ಕೊಲೊಸ್ಸೆ 4:2), ಆಗ ನಮ್ಮನ್ನು ವಿಭಾಗಿಸುವ ವಿಷಯವನ್ನು ತೀರ್ಮಾನಿಸಲು ಕೂಡಿ ಬರುವಾಗಲೆಲ್ಲಾ ಪ್ರಾರ್ಥಿಸಬೇಕು. ಐಕ್ಯತೆಗಾಗಿ ಮತ್ತು ಸಮಾಧಾನಕ್ಕಾಗಿ ನಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವವು ಎಂದು ನಿರೀಕ್ಷಿ ಸಬೇಕು (ಮತ್ತಾಯ 7:7, 8; 1 ಯೋಹಾನ 5:14, 15).

(2) *ವ್ಯಕ್ತಿತ್ವಗಳ ಮೇಲೆ ಅಲ್ಲ ಆದರೆ ವಿಷಯಗಳ ಮೇಲೆ ಕೇಂದ್ರೀಕರಿಸಿರಿ.* ಒತ್ತು ಕೊಡುವಿಕೆಯು ವ್ಯಕ್ತಿಗಳ ಮೇಲೆ ಅಲ್ಲ, ಆದರೆ ನಿರ್ಧರಿಸಲ್ಪಡಬೇಕಾದ ವಿಷಯಗಳ ಮೇಲೆ ಇರತಕ್ಕದ್ದು. ವಿವಾದದೊಂದಿಗೆ ವ್ಯವಹರಿಸುವ ಅತ್ಯುತ್ತಮವಾದ ಮಾರ್ಗವೂ ಅದರೊಂದಿಗೆ ಸಭೆಯು ಎದುರಿಸುತ್ತಿರುವ ಆಹ್ವಾನದಂತೆ ಇಲ್ಲವೆ ಸಮಸ್ಯೆಯಂತೆ ವ್ಯವಹರಿಸುವುದಾಗಿದೆ. ನಾಯಕರು ಚರ್ಚೆಯನ್ನು ವೈಯಕ್ತಿಕವಾದದನ್ನಾಗಿ ಮಾಡಬಾರದು ಒಂದು ಅರ್ಥದಲ್ಲಿ ಸಮಸ್ಯೆಯೊಂದಿಗೆ "ನನ್ನ" ಮತ್ತು "ನಿನ್ನ" ವಿರುದ್ಧದ - ಒಂದು ವೈಯಕ್ತಿಕ ವ್ಯಾಜ್ಯದಂತೆ ಸಮಸ್ಯೆಯೊಂದಿಗೆ ವ್ಯವಹರಿಸಬಾರದು. ಪ್ರಶ್ನೆಯು ಹೀಗಿರಬೇಕು. "ಇಲ್ಲಿ ಸಭೆಯನ್ನು ಎದುರಿಸುತ್ತಿರುವ ಪರಿಸ್ಥಿತಿಯಿದೆ. ಇಲ್ಲಿ ವಿಷಯಗಳಿವೆ. ಈಗ ಸಾಧ್ಯವಾದ ಪರಿಹಾರಗಳು ಯಾವವು? ಮತ್ತು ಅತ್ಯುತ್ತಮ ಪರಿಹಾರವು ಯಾವುದು?"

(3) *ದ್ವೇಷವನ್ನು ಜಯಿಸಿರಿ.* ವಿಷಯಗಳು ನಿರ್ಣಯಿಸಲ್ಪಡುವ ಮೊದಲು ವಿಷಯಗಳಿಗೆ ಬಣ್ಣ ಕೊಡುವ ವೈಯಕ್ತಿಕ ದ್ವೇಷವು ತಿಳಿಸಲ್ಪಡಬೇಕು. ಉದಾಹರಣೆಯಾಗಿ, ಒಳಗೊಂಡ ಸಭೆಯ ನಾಯಕನು ತನ್ನ "ವಿರೋಧಿಯ" ಬಗ್ಗೆ ದ್ವೇಷದ ಭಾವನೆಯನ್ನೊಳಗೊಂಡಿದ್ದರೆ, ಆ ಭಾವನೆಯನ್ನು ಅವನು ತಾನೇ ಒಪ್ಪಿಕೊಳ್ಳಬೇಕು ಮತ್ತು ವಿಷಯಗಳನ್ನು ವಿರೋಧ ಭಾವನೆಯಿಂದ ನೋಡಿಕೊಳ್ಳಲಾಗದಂತೆ ಜಯಿಸಲು ಅಗತ್ಯವಾದದ್ದನ್ನು ಮಾಡಬೇಕು. ಬಹುಶಃ ಇನ್ನೊಬ್ಬನ ಕಡೆಗಿರುವ ದ್ವೇಷವನ್ನು ಜಯಿಸುವ ಅತ್ಯುತ್ತಮವಾದ ಮಾರ್ಗವು ಅವನೊಂದಿಗೆ ಸ್ನೇಹಬೆಳೆಸುವುದಾಗಿರುತ್ತದೆ.

(4) *ನ್ಯಾಯವಾದದ್ದರ ಅಗತ್ಯತೆಯಿರುತ್ತದೆ.* ಪ್ರತಿಯೊಬ್ಬನು ಮಾತಾಡುವದಕ್ಕೆ ಹಕ್ಕುಳ್ಳವನಾಗಿದ್ದಾನೆ, ಒಬ್ಬನು ಒಂದು ಸಲಕ್ಕೆ ಮಾತ್ರ ಮಾತಾಡಬಹುದು. ಯಾರೂ ಚರ್ಚೆಯಲ್ಲಿ ಮೇಲ್ಮೈ ಸಾಧಿಸುವಂತೆ ಬಿಟ್ಟು ಕೊಡಬಾರದು; ಮಾತಾಡುವ ಪ್ರತಿಯೊಬ್ಬನಿಗೆ ಅಷ್ಟೇ ಸಮಯವನ್ನು ಕೊಡತಕ್ಕದ್ದು.

(5) *ಕ್ರೈಸ್ತ ಮನೋಭಾವನೆಯನ್ನು ಪ್ರಕಟಿಸು.* ಪ್ರತಿಯೊಬ್ಬ ವ್ಯಕ್ತಿಯು ಕ್ರೈಸ್ತ ರೀತಿಯಲ್ಲಿ ವರ್ತಿಸಲಿಕ್ಕೆ ಪ್ರೋತ್ಸಾಹಿಸತಕ್ಕದ್ದು. ಕೂಗಾಡಬಾರದು, ವೈಯಕ್ತಿಕ ದೂರುಗಳಿರಬಾರದು, ಬೆದರಿಸುವಿಕೆಯು ಇರಬಾರದು.

(6) *ಬಹಿರಂಗತೆಯನ್ನು ಒದಗಿಸು.* ಕೊಡಲ್ಪಟ್ಟ ಮೇರೆಯೊಳಗೆ ಯಾರಾದರೂ ತನ್ನ ಮನಸ್ಸಿನಲ್ಲಿದ್ದದ್ದನ್ನು, ಒಬ್ಬ ವ್ಯಕ್ತಿಯಂತೆ ಭಯ ದಾಕ್ಷಿಣ್ಯವಿಲ್ಲದೇ ಹೇಳಬೇಕಾದದ್ದನ್ನು, ಹೇಳ

ಲು ಅಪ್ಪಣೆ ಕೊಡಬೇಕು (ಅವನ ವಿಚಾರಗಳು ಸ್ವೀಕರಿಸಲ್ಪಡದೇ ಇರಬಹುದು). *ಅನೇಕ ಉದಾಹರಣೆಗಳಲ್ಲಿ "ವಿರೋಧವು" ಹೇಳುವಂಥದ್ದನ್ನು ಹೇಳಲಿಕ್ಕೆ ಬಿಡುವುದು ಸಭೆಯಲ್ಲಿ ಹೆಚ್ಚಾದವರು ಇಟ್ಟು ಕೊಂಡಿರುವ ಅಭಿಪ್ರಾಯಗಳಿಗೆ ವಿರುದ್ಧವಾಗಿರುವದನ್ನು ಹೇಳುವದನ್ನು ತೃಪ್ತಿಗೊಳಿಸುವುದು.*

(7) *ಭಾವನೆಗಳನ್ನೂ ಸಂಗತಿಗಳನ್ನೂ ಯೋಚಿಸಿರಿ.* ಚರ್ಚೆಯಲ್ಲಿ ಒಳಗೊಂಡಿರುವ ಎಲ್ಲರೂ ಅನಿಸುವಿಕೆಗಳ ಮತ್ತು ಭಾವನೆಗಳ ಮಹತ್ವವನ್ನು ಮೆಚ್ಚಿಕೊಳ್ಳುವ ಅಗತ್ಯತೆಯಿದೆ. ಕೆಲವರ ಅಭಿಪ್ರಾಯಗಳು ಸಂಗತಿಗಳ ಮೇಲೆ ಅಲ್ಲ ಆದರೆ ಭಾವನೆಗಳ ಮೇಲೆ ಅವಲಂಭಿಸಿದ್ದರಿಂದ ಅವುಗಳನ್ನು ಸುಲಭವಾಗಿ ತಳ್ಳಿ ಹಾಕಬಹುದು. ಹೀಗಿದ್ದರೂ, ಭಾವನೆಗಳು ಸಂಗತಿಗಳಾಗಿರುತ್ತವೆ. ಜನರು ಸಂತಿಗಳ ಬಗ್ಗೆ ಭಾವಿಸುವ ರೀತಿಯು ಯೋಚಿಸಲ್ಪಡತಕ್ಕದ್ದು. ಎಲ್ಲಾ "ಸಂಗತಿಗಳು" ಇಲ್ಲವೇ "ತರ್ಕವು" ಒಂದು ದಿಕ್ಕನ್ನು ತೋರಿಸಬಹುದು.ಆದರೆ ಹೆಚ್ಚಾದ ಜನರಿಗೆ ಇನ್ನೊಂದು ಮಾರ್ಗವನ್ನು ತೋರಿಸುವ "ಭಾವನೆಗಳು" ಇರಬಹುದು. ಅವರ "ಭಾವನೆಗಳು" "ಸಂಗತಿಗಳಂತೆ" ಭಾರವಾಗಿರಬಹುದು.

(8) *ಸಮಯದ ಮಿತಿಯಿರಲಿ.* ಚರ್ಚೆಯ ಮೇಲೆ ಮಿತಿಯನ್ನು ಹೇರಬೇಕು, ಮತ್ತು ಇಲ್ಲವೇ ಮೀಟಿಂಗದ ಮೇಲೆ ಮೇಲ್ವಿಚಾರಕನ್ನಾಗಿ ಯಾರನ್ನಾದರೂ ನೇಮಿಸಬೇಕು. ಈ ನಾಯಕನು ಪಕ್ಷಪಾತವಿಲ್ಲದ ಪಾತ್ರವಹಿಸಬೇಕು; ಅವನ ಕಾರ್ಯವು ಎಲ್ಲಾ ಪಕ್ಷಗಳವರನ್ನು ಕೇಳಬೇಕು ಮತ್ತು ಚರ್ಚೆಯು ಸರಿಯಾದ ದಿಕ್ಕಿನಲ್ಲಿ ಸಾಗುವಂತೆ ನೋಡಿ ಕೊಳ್ಳುವುದು ಆಗಿರುತ್ತದೆ, ಎಲ್ಲವೂ ಹೇಳಲ್ಪಟ್ಟು, ಹೆಚ್ಚಿನದೇನನ್ನೂ ಸಾಧಿಸದೇ ಹೋಗುವಾಗ ಕೂಟವನ್ನು ಮುಕ್ತಾಯಗೊಳಿಸಲು ಆ ವ್ಯಕ್ತಿಗೆ ಅಧಿಕಾರ ಕೊಡಬೇಕು.

(9) *ಒಪ್ಪಂದ ಮಾಡಿಕೊಳ್ಳಲು ಸಿದ್ಧರಿರುವದನ್ನು ವ್ಯಕ್ತಪಡಿಸಿರಿ.* ಒಪ್ಪಂದ ಮಾಡಿಕೊಳ್ಳುವುದು ಯಾವಾಗಲೂ ತಪ್ಪಾದದ್ದಾಗಿರುವದಿಲ್ಲ ಎಂಬುದನ್ನು ಚರ್ಚೆಯಲ್ಲಿ ಭಾಗವಹಿಸುವವರು ತಿಳಿದು ಕೊಳ್ಳತಕ್ಕದ್ದು, ಕೆಲವು ಸಲ, ವಿಧಾನಗಳೊಂದಿಗೆ ಸಂಬಂಧಿಸಿದ (ಸಭೆಗೆ "ಒಂದೇ ಕಾಲಕ್ಕೆ ಕೊಡಲ್ಪಟ್ಟ ನಂಬಿಕೆಯೊಂದಿಗೆ" ಅಲ್ಲ), ಚರ್ಚಾಸ್ಪದವಾದ ಪ್ರಶ್ನೆಗಳಿಗೆ ಒಮ್ಮತವನ್ನು ಸಾಧಿಸಲಿಕ್ಕೆ, ಸಭೆಯ ನಾಯಕರು ಒಪ್ಪಂದ ಮಾಡಿಕೊಳ್ಳಬೇಕಾಗಿಬರುವುದು, ಇಲ್ಲವೇ ಸೂಚಿಸಲ್ಪಟ್ಟ ಕಾರ್ಯಕ್ರಮವನ್ನು ಬೇರೆ ರೀತಿಯಲ್ಲಿ ಬದಲಾಯಿಸಬೇಕಾಗುವುದು.

(10) *ಒಮ್ಮತದಿಂದ ತೀರ್ಮಾನಕ್ಕೆ ತಲುಪಿರಿ.* ತೀರ್ಮಾನಗಳು ಒಪ್ಪಂದದಿಂದ ಮಾಡಲ್ಪಡಬೇಕು, ಬಹುಮತದಿಂದ ಅಲ್ಲ.

ಜೇಮ್ಸ್ ಮೀನ್ಸ್ ಎಂಬುವರು *Leadership in Christian Ministry*ಯಲ್ಲಿ ಸಭೆಯ ಸಮಸ್ಯೆಗಳನ್ನು ಪರಿಹರಿಸಲು ಕೂಟಕ್ಕಾಗಿ (ಇಲ್ಲವೇ ಕೂಟಗಳಿಗಾಗಿ) ಒಂದು ಬದಲೀ ವಿಧಾನವನ್ನು ಒದಗಿಸಿದ್ದಾರೆ. ಇಂದು ಕ್ರೈಸ್ತ ನಾಯಕರಿಗಾಗಿ ತೀರ್ಮಾನ ಮಾಡುವದಕ್ಕಾಗಿ ಒಂದು ಉದಾಹರಣೆಯಾಗಿ ಅಪೊಸ್ತಲರ ಕೃತ್ಯ 15ನ್ನು ಉಪಯೋಗಿ ಸಿದ್ದಾರೆ. ಆ ಸಂದರ್ಭದಲ್ಲಿ ಏನು ಮಾಡಲ್ಪಟ್ಟಿತು ಎಂಬುದನ್ನು ಕುರಿತು ಹೇಳಿದ್ದಾರೆ,

> ಆದಿ ಸಭೆಯ ಒಂದು ಒಳ್ಳೆಯ ಮಾದರಿಯ ವಿಧಾನವನ್ನು ನಾವು ಯೋಚಿಸಿದರೆ, ಈ ತೀರ್ಪುಗಳು ಆಧುನಿಕ ಸಭೆಗೆ ಅನ್ವಯಿಸುತ್ತವೆ:
>
> a. ಇಡೀ ಸಭೆಯ ಮೇಲೆ ಪರಿಣಾಮ ಮಾಡುವ ಪ್ರಮುಖ ಪಾಲಿಸಿ ತೀರ್ಮಾನಗಳನ್ನು ಎಲ್ಲಾ ಆಸಕ್ತಿಯುಳ್ಳ ಪಕ್ಷಗಳೊಂದಿಗೆ ಬಹಿರಂಗ ಚರ್ಚೆಯಿಂದ ಮಾಡತಕ್ಕದ್ದು. ನಾಯಕರು ಅಂಥ ಕೂಟಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು, ಚರ್ಚೆಯಲ್ಲಿ ಭಾಗವಹಿಸತಕ್ಕದ್ದು, ಭಿನ್ನಾಭಿಪ್ರಾಯಕ್ಕೆ ಎಡೆಕೊಡಬೇಕು, ತರ್ಕ, ಘಟನೆಗಳಿಂದ ಮತ್ತು ಯಥಾರ್ಥವಾದ ಭಾವನೆಗಳಿಂದ ಪ್ರಭಾವ ಬೀರಲು ಪ್ರಯತ್ನಿಸಬೇಕು, ಸಾಮಾನ್ಯವಾಗಿ ಸಭೆಯನ್ನು ತೀರ್ಮಾನಕ್ಕೆ ನಡಿಸಬೇಕು. ಅಧಿಕಾರ ತೋರಿಸುವ ವಿಧಾನಗಳನ್ನು

ಕೈ ಬಿಡಬೇಕು. ಚರ್ಚಾಸ್ಪದವಾದ ಹಾಗೂ ಮಾನಸಿಕ ವಾಗಿ ಉದ್ವೇಗದಿಂದ ತುಂಬಿದ ವಿಷಯಗಳ ಮೇಲೆ ಚರ್ಚೆಯನ್ನು ಮಿತಿಗೊಳಿಸಬೇಕು, ಏಕ ಪಕ್ಷೀಯ ನಿರ್ಣಯ ಮಾಡಬಾರದು, ಒಪ್ಪಂದಕ್ಕೆ ಒಮ್ಮಂತಕ್ಕೆ ಬರುವಂತೆ ನಾಯಕರು ಪ್ರಯತ್ನಿಸಬೇಕು.

b. ಸಭೆಯು ತನ್ನ ಪ್ರಮುಖ ತೀರ್ಮಾನಗಳ ಬಗ್ಗೆ ಸಾಕಷ್ಟು ಸಮಯವನ್ನು ಪ್ರಾರ್ಥನೆಯಲ್ಲಿ ಕಳೆಯ ಬೇಕು, ದೇವರ ಮಾರ್ಗದರ್ಶನಕ್ಕಾಗಿ ಆಶೀರ್ವಾ ದಕ್ಕಾಗಿ ಹುಡುಕಬೇಕು. ...

c. ದೇವರ ಅಪೇಕ್ಷೆ ಏನು ಇದೆಯೆಂದು ಕಂಡು ಕೊಳ್ಳುವದಕ್ಕಾಗಿ ಸಂಬಂಧ ಪಟ್ಟ ಪರಿಶುದ್ಧ ಬರಹದ ಸಂಬಂಧಪಟ್ಟ ಎಲ್ಲಾ ವಾಕ್ಯಭಾಗಗಳನ್ನು ಪರೀಕ್ಷಿಸಬೇಕು. ಎಲ್ಲಾ ವಿಷಯಗಳ ಮೇಲೆ ಪರಿಶುದ್ಧ ಬರಹದ ಪ್ರಭಾವವಿರಲಿಕ್ಕಾಗುವಂತೆ ಸಭೆಯ ಹಿರಿಯರು ಬೈಬಲಿನ ತಿಳುವಳಿಕೆಯಲ್ಲಿ ಉನ್ನತ ಮಟ್ಟದ ತರಬೇತಿ ಹೊಂದಿರಬೇಕು. ಪರಿಶುದ್ಧ ಬರಹವು ಎಲ್ಲಾ ಚರ್ಚಾಸ್ಪದವಾದ ವಿಷಯಗಳಿಗೆ ಆಜ್ಞೆಯನ್ನು ಕೊಡದಿದ್ದರೂ ಅಲ್ಲಿ ಸಾಮಾನ್ಯ ವಾಗಿ ಅನ್ವಯಿಸಬಹುದಾದ ತತ್ವಗಳಿರುವವು.[5]

*ಮೂರನೆಯದು, ಕೆಲವು ಸಲ ಸಭೆಯ ಎಲ್ಲಾ ರೀತಿಯ ಐಕ್ಯತೆಯು ಕರ್ತನಿಗಾಗಿ ನಂಬಿಗಸ್ತಿಕೆಯಿಂದ ಕೆಲಸಮಾಡುವದಕ್ಕೆ ತಮ್ಮ ಪ್ರತ್ಯೇಕವಾದ ಮಾರ್ಗಗಳಿಂದ ಸಹೋದ ರರು ಹೋಗುವದರಿಂದ ಚೆನ್ನಾಗಿ ಸೇವೆ ಮಾಡಲಿಕ್ಕಾಗುತ್ತದೆ.* ಅಪೊಸ್ತಲ ಕೃತ್ಯಗಳು 15:36-41ರಲ್ಲಿ, ದಾಖಲೆಯಾದಂತೆ ಪೌಲ ಮತ್ತು ಬಾರ್ನಬರ ಅನುಭವವು ಈ ವಿಚಾರವನ್ನು ಸೂಚಿಸುತ್ತದೆ. ಮೊದಲನೆಯ ಸುವಾರ್ತಾ ಪ್ರಸಂಗ ಪ್ರಯಾಣದಲ್ಲಿ ಸ್ಥಾಪಿಸಲ್ಪಟ್ಟ ಸಭೆಗ ಳನ್ನು ಸಂದರ್ಶಿಸಲು ತಾನು ಮತ್ತು ಬಾರ್ನಬ ಹೋಗುವೆವೆಂದು ಪೌಲನು ಸೂಚಿಸಿದನು. ಬಾರ್ನಬನು ಒಪ್ಪಿಕೊಂಡನು. ಆದರೆ ಅವನು ಯೋಹಾನ ಮಾರ್ಕನನ್ನು (ತನ್ನ ಸಹೋ ದರನ ಮಗನನ್ನು, ಕೊಲೊಸ್ಸೆ 4:10) ತಮ್ಮೊಂದಿಗೆ ಕರೆದು ಕೊಂಡು ಹೋಗಬೇಕೆಂದಿದ್ದನು. ಹೀಗಿದ್ದರೂ ಯೋಹಾನ ಮಾರ್ಕನು ಮೊದಲನೆಯ ಪ್ರಯಾಣದಲ್ಲಿ ಹಿಂದಿರುಗಿ ಹೋಗಿ ದ್ದನು (ಅಪೊಸ್ತಲರ ಕೃತ್ಯಗಳು 13:13) ಮತ್ತು ಪೌಲನು, ಅವನ ಈ ತೊಂದರೆಯ ಬಗ್ಗೆ ದೂರು ಹೇಳಿ ಅವನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಸಿದ್ಧನಾಗಿರಲಿಲ್ಲ. ಇದರ ಪರಿಣಾಮವಾಗಿ, ಒಂದು ಭಿನ್ನಾಭಿಪ್ರಾಯವಲ್ಲ ಆದರೆ “ತೀಕ್ಷಣವಾದ ಅಸಮ್ಮತಿಯು” ಪೌಲ ಮತ್ತು ಬಾರ್ನಬರ ಮದ್ಯದಲ್ಲಿ ಉಂಟಾಯಿತು (ಅಪೊಸ್ತಲರ ಕೃತ್ಯಗಳು 15:39). ಅದರ ಪರಿಣಾಮವಾಗಿ, ಅವನವನು ಬೇರೆಬೇರೆಯಾಗಿ ಹೋದರು: “... ಅವರು ಒಬ್ಬರಿಗೊಬ್ಬರು ಬೇರೆ ಬೇರೆಯಾದರು” (ಅಪೊಸ್ತಲರ ಕೃತ್ಯಗಳ 15:39). ಬಾರ್ನಬ ಮತ್ತು ಯೋಹಾನ ಮಾರ್ಕರು ಮೊದಲನೆಯ ಪ್ರಯಾಣದಲ್ಲಿ ಸಂದರ್ಶಿಸಲ್ಪಟ್ಟ ಕುಪ್ರ ದ್ವೀಪಕ್ಕೆ ಕೆಲಸ ಮಾಡಲು ಹೋದರು. ಪೌಲನು ಸೀಲನನ್ನು ತೆಗೆದು ಕೊಂಡು ಚಿಕ್ಕ ಆಸ್ಯದಲ್ಲಿ ಸ್ಥಾಪಿಸಲ್ಪಟ್ಟ ಸಭೆಗಳನ್ನು ಸಂದರ್ಶಿಸಲು ಹೋದನು. ಕಿಲಿಕ್ಯವನ್ನು (ಅವನ ಸ್ವಂತ ಊರು, ಅಪೊಸ್ತಲರ ಕೃತ್ಯಗಳು 22:3). ಮಾರ್ಗದಲ್ಲಿ ದಾಟಿ ಹೋದರು (ಅಪೊಸ್ತಲರ ಕೃತ್ಯಗಳು 15:40, 41).

ಒಳ್ಳೆಯ, ನಂಬಿಗಸ್ತ ಸಹೋದರರು ಅವಸರದ ವಿಷಯಗಳಲ್ಲಿ ಒಬ್ಬರಾದರೂ ಪಾಪಮಾಡದೇ ಒಪ್ಪಿಕೊಳ್ಳದಿರಬಹುದು ಎಂಬುದನ್ನು ಪೌಲ ಮತ್ತು ಬಾರ್ನಬರಿಂದ ಕಲಿತು ಕೊಳ್ಳುತ್ತೇವೆ. ಈ ವಿಷಯಗಳ ಬಗ್ಗೆ ಕ್ರೈಸ್ತರು ಒಪ್ರಿಕೊಳ್ಳದಿರಲು ಒಪ್ಪಿಕೊಳ್ಳ ಬಹುದು. ಆದರೆ ಕೆಲವು ಸಲ ಒಪ್ಪಿಕೊಳ್ಳದಿರುವಿಕೆಗಳು ತೀಕ್ಷಣವಾಗಿರಬಹುದು. ಅವು ಸಹೋದ ರರು ಒಂದಾಗಿ ಕೆಲಸ ಮಾಡಲು ಅಸಾಧ್ಯವಾದವುಗಳನ್ನಾಗಿ ಮಾಡಬಹುದು. ಅದು ಸಂಭವಿಸುವಾಗ, ಆ ಸಹೋದರರು ಬೇರೆ ಬೇರೆಯಾಗಿ ಕೆಲಸ ಮಾಡುವುದು, ಒಳ್ಳೆಯ ದಾಗಿರುತ್ತದೆ. ಅವರು ಒಬ್ಬರನ್ನೊಬ್ಬರು ಅಗಲುವದರಿಂದ, ಸಭೆಯು ಒಂದು ರೀತಿಯಲ್ಲಿ ಹೆಚ್ಚು ಸಮಾಧಾನವನ್ನು ಹೊಂದಿಕೊಳ್ಳಬಹುದು. ದೇವರ ನಡಿಸುವಿಕೆಯಲ್ಲಿ, ಒಳ್ಳೆಯದಾಗಿ ಮಾಡಲ್ಪಟ್ಟ ದೀರ್ಘಕಾಲದಲ್ಲಿ ಹೆಚ್ಚಾಗಬಹುದು, ಅಪೊಸ್ತಲರ ಕೃತ್ಯ ಗಳು 15ರಲ್ಲಿಯ

ಉದಾಹರಣೆಯಲ್ಲಿ, ಇಬ್ಬರು ಇಲ್ಲವೇ ಮೂರಕ್ಕಿಂತ ಹೆಚ್ಚಾಗಿ ನಾಲ್ಕು ಜನರು ಸೇವಾ ಕ್ಷೇತ್ರಕ್ಕೆ ಹೋದರು, ಮತ್ತು ಅವರು ಒಂದು ಕ್ಷೇತ್ರಕ್ಕಲ್ಲ ಆದರೆ ಎರಡು ಕ್ಷೇತ್ರಗಳಿಗೆ ಹೋದರು. ಇಮ್ಮಡಿ ಒಳ್ಳೆಯದು ಸಾಧ್ಯವಾದ ಸಾಧ್ಯತೆಯಿರುತ್ತದೆ. ಹೀಗಿದ್ದರೂ, ಪ್ರತಿಯೊಂದು, "ಒಳ್ಳೆಯದಾಗಿ ಕೆಲಸ ಮಾಡುವುದಾದರೆ" (ರೋಮಾಪುರ 8:28), ಒಳಗೊಂಡಿರುವಂಥ ಜನರು ಒಳ್ಳೆಯ ಮನೋಭಾವನೆಯುಳ್ಳವರಾಗಿರಬೇಕಾದ ಅಗತ್ಯತೆ ಇರುತ್ತದೆ. ಈ ಅನುಭವದ ಮೂಲಕ ವಾಗಿ ಪೌಲನು ಬಾರ್ನಬ ಬಗ್ಗೆ ಕಡಿಮೆಯಾಗಿ ಭಾವಿಸಲಿಲ್ಲ, ಮತ್ತು ಜಾನ್ ಮಾರ್ಕ್‌ನಿಗೆ ವಿರುದ್ಧವಾಗಿ ದ್ವೇಷವಿಟ್ಟು ಕೊಳ್ಳಲಿಲ್ಲ. ಪೌಲನು ತನ್ನ ವೃದ್ಧಾಪ್ಯದ ಸಮಯದಲ್ಲಿ, ಒಂದು ಸಾರಿ ತನ್ನೊಂದಿಗೆ ಕಳೆದು ಕಂಡು ಹೋಗಲು ನಿರಾಕರಿಸಿದವನ ಬಗ್ಗೆ ಗೌರವದಿಂದ ಮತ್ತು ಮೆಚ್ಚಿಕೆಯಿಂದ ಮಾತಾಡಿದನು (ಕೊಲೊಸ್ಸೆ 4:10; 2 ತಿಮೊಥೆ 4:11).

## ಮುಕ್ತಾಯ

ಸಭೆಯ ಹಿರಿಯನ ಗುರಿಯು ಹೋರಾಟಕ್ಕೆ ಸಂಬಂಧಿಸಿ ಸಮಾಧಾನವನ್ನು ಪ್ರೀತಿಸುವುದು, ಸಾಧ್ಯವಾದಷ್ಟು ಇತರರೊಂದಿಗೆ ಸಾಮಾಧಾನದಿಂದ ಜೀವಿಸುವುದು (ರೋಮಾಪುರ 12:18), ಮತ್ತು ಸಮಾಧಾನಪಡಿಸುವುದು ಆಗಿರುತ್ತದೆ.

ಸಮಾಧಾನವನ್ನು ಪ್ರೀತಿಸುವ ಒಬ್ಬ ಮನುಷ್ಯನ ಒಂದು ಉದಾಹರಣೆಯನ್ನು ಅಬ್ರಾಹಾಮನು ಒದಗಿಸಿದ್ದಾನೆ. ಅವನು ಮತ್ತು ಅವನ ತಮ್ಮನ ಮಗ ಲೋಟನು ಇಬ್ಬರೂ ಕುರಿದನಗಳು ದೊಡ್ಡ ಸಂಖ್ಯೆಯಲ್ಲಿರುವದರಿಂದ ಆಶೀರ್ವದಿಸಲ್ಪಟ್ಟರು (ಆದಿಕಾಂಡ 13:2, 5). ಕೆಲಕಾಲ ಅವರು ಒಂದಾಗಿ ಜೀವಿಸುತ್ತ, ಪ್ರಯಾಣ ಮುಂದುವರಿಸಿದಾಗ, "ಆ ಸ್ಥಳವು ಅವರಿಗೆ ಸಾಲದೆ ಹೋಯಿತು. ಅವರಿಬ್ಬರ ಆಸ್ತಿ ಬಹಳವಾದ್ದರಿಂದ ಒಂದೇ ಸ್ಥಳದಲ್ಲಿ ವಾಸಿಸುವುದು ಅಸಾಧ್ಯವಾಯಿತು. ಇದರಿಂದ ಅಬ್ರಾಮನ ದನಕಾಯುವವರಿಗೂ ಲೋಟನ ದನಕಾಯುವವರಿಗೂ ಜಗಳ ಹುಟ್ಟಿತು" (ಆದಿಕಾಂಡ 13:6, 7ಎ; RSV) ಏನು ಮಾಡಲ್ಪಡಬೇಕು? ಅಬ್ರಹಾಮನು ಆ ಕ್ಷೇತ್ರದಲ್ಲಿ ಉಳಿದುಕೊಳ್ಳಲಿಕ್ಕೆ ಒತ್ತಾಯಿಸಿರಬಹುದು, ಲೋಟನು ಬಿಟ್ಟು ಹೋಗಬೇಕಾಯಿತು. ಲೋಟನಿಗೆ ಭೂಮಿಯ ಆಯ್ಕೆಯನ್ನು ಅವನು ಕೊಟ್ಟನು:

> ಹೀಗಿರಲಾಗಿ ಅಬಾಹ್ರಾಮನು ಲೋಟನಿಗೆ - ನನಗೂ ನಿನಗೂ, ನನ್ನ ದನಕಾಯುವವರಿಗೂ ನಿನ್ನ ದನ ಕಾಯುವವರಿಗೂ ಜಗಳವಿರಬಾರದು; ನಾವು ಸಹೋದರರಲ್ಲವೇ. ದೇಶವೆಲ್ಲಾ ನಿನ್ನೆದರಿಗೆ ಇದೆ; ದಯವಿಟ್ಟು ನನ್ನನ್ನು ಬಿಟ್ಟು ಪ್ರತ್ಯೇಕ ಹೋಗು. ನೀನು ಎಡಗಡೆಗೆ ಹೋದರೆ ನಾನು ಬಲಗಡೆಗೆ ಹೋಗುವೆನು; ನೀನು ಬಲಗಡೆಗೆ ಹೋದರೆ ನಾನು ಎಡಗಡೆಗೆ ಹೋಗುವೆನು ಎಂದು ಹೇಳಿದನು (ಆದಿಕಾಂಡ 13:8, 9; KJV).

"ಕಥೆಯ ಉಳಿದ ಭಾಗವನ್ನು" ನಾವು ನೋಡಿದ್ದೇವೆ. ಲೋಟನು ... "ಸೊದೋಮಿಗೆ ಬಂದನು" (ಆದಿಕಾಂಡ 13:12; KJV). ಅಂತಿಮವಾಗಿ ಅವನಿಗೂ ಅವನ ಕುಟುಂಬಕ್ಕೂ ನಾಶಕರವಾದ ಪರಿಣಾಮಗಳಾದವು. ಅದಕ್ಕೆ ವಿರುದ್ಧವಾಗಿ, ಅಬ್ರಹಾಮನನ್ನು ಅವನ ಸ್ವದೇಶದಿಂದ ಕರೆದ ದೇವರಿಂದ ಅವನು ಹೊಸ ವಾಗ್ದಾನಗಳನ್ನು ಸ್ವೀಕರಿಸಿದನು (ಆದಿಕಾಂಡ 13:14-17).

ಸಮಾಧಾನಕ್ಕಾಗಿ ಯಾವ ಕ್ರಯ ಕೊಡಲು ನಾವು ಸಿದ್ಧರಾಗಿದ್ದೇವೆ? "ಸಮಾಧಾನ ಯಾವುದೇ ಕ್ರಯದಿಂದ" ತತ್ವದ ಶುದ್ಧೀಕರಣದ ಕ್ರಯ ಕೊಟ್ಟಾದರೂ ಅದು ಬಹಳವಾದದ್ದು ಹೀಗಿದ್ದರೂ ಕುಟುಂಬದಲ್ಲಿ ಸಮಾಧಾನವನ್ನು ತರಲು ಅಬ್ರಹಾಮನು ಕೊಟ್ಟ ಕ್ರಯ ಕೊಡಲು ನಾವು ಸಿದ್ಧರಾಗಿರಬೇಕು. ಹೀಗೆ ಹೇಳುವದನ್ನು ಕಲಿಯಲು ನಾವು ಸಿದ್ಧರಾಗಿರಬೇಕು: "ನಮ್ಮ ಮಧ್ಯದಲ್ಲಿ ಜಗಳವಿರಬಾರದು, ನೀನು ನಿನ್ನ ಆಯ್ಕೆ ಮಾಡಿಕೋ, ನಿನಗೆ ನಿನ್ನ ಮಾರ್ಗವಿರಲಿ,

ಅದರಿಂದ ನಾವು ಸಮಾಧಾನದಲ್ಲಿರೋಣ, ನಾವು ಸಹೋದರರಲ್ಲವೇ."

---

ಟಿಪ್ಪಣಿಗಳು

[1]*The World Book Encyclopedia Dictionary,* s.v. "strife." [2]*Webster's New Collegiate Dictionary,* s.v. "strife." [3]ಈ ಪದವು ಒಳಗೊಂಡಿರುವ ವಾಕ್ಯಭಾಗಗಳಲ್ಲಿ ಇವು ಒಳಗೊಂಡಿರುತ್ತವೆ. ರೋಮಾಪುರ 1:29; 13:13; 1 ಕೊರಿಂಥ 1:11; 3:3; 2 ಕೊರಿಂಥ 12:20; ಫಿಲಿಪ್ಪಿ 1:15; 1 ತಿಮೊಥೆ 6:4; ಮತ್ತು ತೀತ 3:9. [4]ಈ ವಿಷಯದ ಬಗ್ಗೆ ಹೆಚ್ಚು ವಿವರಗಳಿಗೆ "ತತ್ವ ಸಂಬಂಧವಾದ ವಿಷಯಗಳನ್ನು ಎದುರಿಸುವುದು" ಎಂಬ ಪಾಠವನ್ನು ನೋಡಿ. [5]James E. Means, *Leadership in Christian Ministry* (Grand Rapids, Mich.: Baker Book House, 1989), 192-93.